**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ ಇವರ ನ್ಯಾಯಾಲಯ**

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.**55/2023**
ಪಿ.ಡಬ್ಲೂ.01
ಸಿ.ಡಬ್ಲೂ.01

ಸಾಕ್ಷಿದಾರರ ಹೆಸರು : ಸಂಜನಾ ಮಾಂಗ.
ತಂದೆಯ ಹೆಸರು : ಕಾಡಪ್ಪ
ವಯಸ್ಸು : 19 ವರ್ಷ.
ಉದ್ಯೋಗ : ವಿದ್ಯಾರ್ಥಿ
ವಾಸಸ್ಥಳ : ಕೆಮಲಾಪುರ, ತಾಃ ರಾಯಬಾಗ, ಜಿಃ ಬೆಳಗಾವಿ.

ಇಂದು ದಿನಾಂಕ **09-09-2024** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ:**

1) ಚಾಸಾ-6 ನನ್ನ ತಾಯಿ. ಚಾಸಾ-7 ನನ್ನ ತಂದೆ. ನನ್ನ ಖುದ್ದು ಊರು ಕೆಮಲಾಪುರ. ಊರಿನಲ್ಲಿ ನಾನು, ನನ್ನ ತಂದೆ, ತಾಯಿ ಮತ್ತು ತಮ್ಮ ವಾಸ ಇರುತ್ತೇವೆ. ನಾನು 10 ನೇ ತರಗತಿಯವರೆಗೆ ನಮ್ಮ ಊರು ಕೆಮಲಾಪುರದಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ಪಿ.ಯು.ಸಿ ಕಲೆಯಲು ವಿಜಯಪುರಕ್ಕೆ ಬಂದಿದ್ದೇನೆ. ನಾನು ವಿಜಯಪುರದ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದೇನೆ. ನಾನು ಪಿ.ಯು.ಸಿ ಕಲೆಯುತ್ತಿದ್ದಾಗ ವಿಜಯಪುರದ ಮೀನಾಕ್ಷಿ ಚೌಕನಲ್ಲಿರುವ ಸೌರಭ ಪಿ.ಜಿಯಲ್ಲಿ ವಾಸ ಮಾಡುತ್ತಿದ್ದೆ. ಕಳೆದ ವರ್ಷ ನಾನು ದ್ವಿತೀಯ ಪಿ.ಯು.ಸಿ ಅಭ್ಯಾಸ ಮಾಡುತ್ತಿದ್ದೆ. ರಜೆ ಇದ್ದಾಗ ಊರಿಗೆ ಹೋಗಿ ಬರುವುದು ಮಾಡುತ್ತಿದ್ದೆ. ನನ್ನನ್ನು ಬೇಟಿ ಮಾಡಲು ನನ್ನ ತಾಯಿ, ತಮ್ಮ ಬರುತ್ತಿದ್ದರು. ನನ್ನದು ಹಿಂದೂ ಮಾದರ ಜಾತಿ.

2) ಒಂದು ವರ್ಷದ ಹಿಂದೆ ನನ್ನ ತಾಯಿ ಮೀನಾಕ್ಷಿ ಚೌಕಗೆ ನನ್ನನ್ನು ನೋಡಲು ಬಂದಿದ್ದರು. ನಮ್ಮ ಊರಿನಿಂದ ಬಸ್ಸಿಗೆ ಬಂದವರು ವಿಜಯಪುರದ ಗೋದಾವರಿ ಬಸ್ ಸ್ಟಾಪದಲ್ಲಿ ಇಳಿದು, ಅಲ್ಲಿಂದ ಆಟೋದಲ್ಲಿ ಸೌರಭ ಪಿ.ಜಿಗೆ

ಬಂದಿದ್ದರು. ನಾನು ಸೌರಭ ಪಿ.ಜಿ ಮುಂದೆ ಬಂದು ನಿಂತಿದ್ದೆ. ನನ್ನ ತಾಯಿ ಆಟೋದಿಂದ ಇಳಿದು ಆಟೋದವನ ಜೊತೆ ಮಾತನಾಡುತ್ತಾ ನಿಂತಿದ್ದರು. ಆತನ ಹೆಸರು ತೊಹಿದ್ ಅಂತಾ ಗೊತ್ತಾಗಿತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಆ ದಿನದ ಆಟೋ ಚಾಲಕ ಆಗಿದ್ದ. ಆತ ಮುಸ್ಲಿಂ ಜಾತಿಗೆ ಸೇರಿದವನು. ಆ ಸಮಯದಲ್ಲಿ ಆರೋಪಿಯ ಪರಿಚಯ ನನಗೆ ಆಗಿತ್ತು. ಆತ ನನ್ನನ್ನು 2-3 ಬಾರಿ ಬೇಟಿ ಮಾಡಿದ್ದ.

3) ಕಳೆದ ಒಂದು ವರ್ಷದ ಹಿಂದೆ ನಾನು ನಮ್ಮ ಊರಿಗೆ ಹೋಗಲು ನಡೆದುಕೊಂಡು ಜಮಖಂಡಿ ರಸ್ತೆಗೆ ಹೊರಟಿದ್ದೆ. ಆಗ ಆರೋಪಿ ಆಟೋದಲ್ಲಿ ಬಂದಿದ್ದ. ಬಂದವನು ನನ್ನನ್ನು ಬಸ್ ಸ್ಟಾಪಗೆ ಬಿಡಿತಿನಿ ಅಂತಾ ಹೇಳಿದ್ದ. ನಾನು ಆಟೋ ಹತ್ತಿಕೊಂಡಿದ್ದೆ. ಮುಂದೆ ನನ್ನನ್ನು ಜಮಖಂಡಿ ರಸ್ತೆಗೆ ಕರೆದುಕೊಂಡು ಹೊರಟಿದ್ದ. ನಾನು ಆತನನ್ನು ಬಸ್ ಸ್ಟಾಪ ಹತ್ತಿರ ಬಿಡುವುದು ಬಿಟ್ಟು ಇಲ್ಲಿ ಏಕೆ ಕರೆದುಕೊಂಡು ಬಂದೇ ಅಂತಾ ಕೇಳಿದ್ದೆ, ಅದಕ್ಕೆ ಆತ ನನಗೆ ನನ್ನ ಹತ್ತಿರ ಕೆಲಸ ಇದೆ ಅಂತಾ ಬೈದಿದ್ದ. ಮುಂದೆ ನನ್ನನ್ನು ಶಿರಗೂರ ಪ್ಲಾಟನಲ್ಲಿರುವ ವೆಲಕಮ್ ಬೊರ್ಡ್ ಹತ್ತಿರ ಕರೆದುಕೊಂಡು ಹೋಗಿದ್ದ. ಅಲ್ಲಿ ಆಟೋ ನಿಲ್ಲಿಸಿದ್ದ, ಅಲ್ಲಿ ಯಾರು ಜನ ಇರಲಿಲ್ಲ. ನನ್ನನ್ನು ಕೆಳಗಡೆ ಮಲಗಿಸಿದ್ದ. ನನ್ನ ಮೈ ಮೇಲಿನ ಬಟೆಯನ್ನು ಕಳಚಿ, ತಾನು ಕೂಡ ತನ್ನ ಬಟ್ಟೆಯನ್ನು ಕಳಚಿ ಮೈ ಮೇಲೆ ಬಿದ್ದು ಸಂಭೋಗ ಮಾಡಿದ್ದ. ನಂತರ ನನ್ನನ್ನು ಅಲ್ಲೇ ಬಿಟ್ಟು ಆಟೋ ತೆಗೆದುಕೊಂಡು ವಾಪಸ್ಸು ಹೋಗಿದ್ದ. ನಂತರ ನಾನು ಬೇರೆ ಆಟೋ ತೆಗೆದುಕೊಂಡು ವಾಪಸ್ಸು ಮೀನಾಕ್ಷಿ ಚೌಕದ ಸೌರಭ ಪಿ.ಜಿಗೆ ಬಂದಿದ್ದೆ.

4) ಮುಂದೆ 2 ದಿನ ಆದ ಮೇಲೆ ಈ ವಿಷಯವನ್ನು ಚಾಸಾ-8 ರವಿ ಇವರಿಗೆ ತಿಳಿಸಿದ್ದೆ. ನಂತರ 2-3 ದಿನ ಆದ ಮೇಲೆ ನನ್ನ ತಾಯಿಗೆ ವಿಷಯವನ್ನು ತಿಳಿಸಿದ್ದೆ. ಮುಂದೆ ನನ್ನ ತಾಯಿಯನ್ನು ಕರೆದುಕೊಂಡು ಹೋಗಿ ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ. ಘಟನೆ ಆದಾಗ ಮದ್ಯಾಹ್ನ 2 ಗಂಟೆ ಆಗಿತ್ತು.

5) ಸಾಕ್ಷಿಗೆ ದಿಃ 07.09.2023 ರ ದೂರಿನ ಮೇಲೆ ಇರುವ ಸಹಿಯನ್ನು ತೋರಿಸಲಾಗಿ ತನ್ನ ಸಹಿಯನ್ನು ಒಪ್ಪಿದ್ದರಿಂದ ದಾಖಲೆಯನ್ನು ನಿಪಿ-1 ಅಂತಾ, ಸಾಕ್ಷಿ ಸಹಿಯನ್ನು ನಿಪಿ-1(ಒ) ಅಂತಾ ಗುರುತಿಸಲಾಯಿತು.

6) ಠಾಣೆಗೆ ದೂರು ನೀಡಿದ ನಂತರ ಆರೋಪಿಯ ಪೂರ್ಣ ಹೆಸರು ತೊಹಿದ್ ಗೌಸಮೋದ್ದಿನ್ ಸಿಂದಗಿ ಅಂತಾ ಗೊತ್ತಾಗಿತ್ತು. ಈ ಬಗ್ಗೆ ನಾನು ಪೊಲೀಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ.

7) ನಂತರ ಪೊಲೀಸರಿಗೆ ನಾನು ಘಟನ ಸ್ಥಳವನ್ನು ತೋರಿಸಿರುತ್ತೇನೆ. ಸಾಕ್ಷಿಯು ದಿಃ 09.09.2023 ರ ಸ್ಥಳ ಪಂಚನಾಮೆ ಮೇಲೆ ಇರುವ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-2 ಅಂತಾ, ಸಾಕ್ಷಿ ಸಹಿಯನ್ನು ನಿಪಿ-2(ಎ) ಅಂತಾ ಗುರುತಿಸಲಾಯಿತು. ಸಾಕ್ಷಿಗೆ ಎರಡು ಪೊಟೊಗಳನ್ನು ತೋರಿಸಲಾಗಿ ತನ್ನ ಇರುವಿಕೆಯನ್ನು ಒಪ್ಪಿದ್ದರಿಂದ ಅವುಗಳನ್ನು ನಿಪಿ-3 ಮತ್ತು 4 ಅಂತಾ ಗುರುತಿಸಲಾಯಿತು.

8) ವೈದರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನನ್ನು ಪರೀಕ್ಷೆ ಮಾಡಿರುತ್ತಾರೆ. ಅದೇ ರೀತಿ ನಾನು ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಈ ದಿನ ತೆರದ ನ್ಯಾಯಾಲಯದಲ್ಲಿ ಕಲಂ 164 ಸಿಆರ್.ಪಿ.ಸಿ ಹೇಳಿಕೆಯನ್ನು ಶೀಲ್ಡ್ ಲಕೋಟೆಯಲ್ಲಿ ಇದಿದ್ದನ್ನ ತೆರೆದು ನೋಡಿ ಸಾಕ್ಷಿ ತನ್ನ ಸಹಿಯನ್ನು ಒಪ್ಪಿದ್ದರಿಂದ ಅದನ್ನು ನಿಪಿ-5 ಅಂತಾ, ಸಾಕ್ಷಿ ಸಹಿಯನ್ನು ನಿಪಿ-5(ಎ) ಗುರುತಿಸಲಾಯಿತು.

9) ಆರೋಪಿ ಆ ದಿನ ನನ್ನನ್ನು ಕರೆದುಕೊಂಡು ಹೋದ ಆಟೋವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಗೆ ಒಂದು ಪೊಟೊವನ್ನು ತೊರಿಸಲಾಗಿ ಅದರಲ್ಲಿರುವ ಆಟೋವನ್ನು ನೋಡಿ ಗುರುತಿಸಿದ್ದರಿಂದ ಸದರಿ ಪೊಟೊವನ್ನು ನಿಪಿ-6 ಅಂತಾ ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ.ವಿ.ಎಸ್.ಪಿ ವಕೀಲರಿಂದಃ ಸಮಯ ಕೋರಿದ್ದು, ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲನ್ನು</u>

ಇಲ್ಲ ಅಂತಾ ತೆಗೆದುಕೊಳ್ಳಲಾಗಿದೆ.
ಮರುವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.
**09/09/2024**

**2** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು,
ವಿಜಯಪೂರ ಇವರ ನ್ಯಾಯಾಲಯ

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.**55/2023**

ಪಿ.ಡಬ್ಲೂ.02

ಸಿ.ಡಬ್ಲೂ.06

ಸಾಕ್ಷಿದಾರರ ಹೆಸರು : ಮಾಲವ್ವ ಮಾಂಗ.

ಗಂಡನ ಹೆಸರು : ಕಾಡಪ್ಪ

ವಯಸ್ಸು : 36 ವರ್ಷ.

ಉದ್ಯೋಗ : ಮನೆ ಕೆಲಸ

ವಾಸಸ್ಥಳ : ಕೆಮಲಾಪುರ, ತಾಃ ರಾಯಬಾಗ, ಜಿಃ ಬೆಳಗಾವಿ.

ಇಂದು ದಿನಾಂಕ **09-09-2024** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ:

1) ಚಾಸಾ-1 ನನ್ನ ಮಗಳ. ಚಾಸಾ-7 ನನ್ನ ಗಂಡ. ನನ್ನ ಖುದ್ದು ಊರು ಕೆಮಲಾಪುರ. ಊರಿನಲ್ಲಿ ನಾನು, ನನ್ನ ಗಂಡ, ಮಗಳು ಮತ್ತು ಮಗ ವಾಸ ಇರುತ್ತೇವೆ. ನನ್ನ ಮಗಳು ಚಾಸಾ-1 ರವರು 10 ನೇ ತರಗತಿಯವರೆಗೆ ನಮ್ಮ ಊರು ಕೆಮಲಾಪುರದಲ್ಲಿ ವಿದ್ಯಾಭ್ಯಾಸ ಮಾಡಿರುತ್ತಾಳೆ. ಪಿ.ಯು.ಸಿ ಕಲೆಯಲು ವಿಜಯಪುರಕ್ಕೆ ಕಳುಹಿಸಿದ್ದೇವೆ. ಆಕೆ ವಿಜಯಪುರದ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದಾಳ. ಆಕೆ ಪಿ.ಯು.ಸಿ ಕಲೆಯುತ್ತಿದ್ದಾಗ ವಿಜಯಪುರದ ಮೀನಾಕ್ಷಿ ಚೌಕನಲ್ಲಿರುವ ಸೌರಭ ಪಿ.ಜಿಯಲ್ಲಿ ವಾಸ ಮಾಡುತ್ತಿದ್ದಳು. ಕಳೆದ ವರ್ಷ ಆಕೆ ದ್ವಿತೀಯ ಪಿ.ಯು.ಸಿ ಅಭ್ಯಾಸ ಮಾಡುತ್ತಿದ್ದಳು. ರಜೆ ಇದ್ದಾಗ ಊರಿಗೆ ಹೋಗಿ ಬರುವುದು ಮಾಡುತ್ತಿದ್ದಳು. ಅಕೆಯನ್ನ ಬೇಟಿ ಮಾಡಲು ನಾನು ನನ್ನ ಮಗ ಬರುತ್ತಿದ್ದೇವು. ನನ್ನದು ಹಿಂದೂ ಮಾದರ ಜಾತಿ.

2) ಆರೋಪಿಯ ಪರಿಚಯ ಇದೆ. ನಾನು ನನ್ನ ಮಗಳು ಚಾಸಾ-1 ಇವಳನ್ನು ನೋಡಲು ಕೆಮಲಾಪುರದಿಂದ ಈಗ್ಗೆ ಒಂದು ವರ್ಷದ ಹಿಂದೆ ವಿಜಯಪುರದ ಗೋದಾವರಿ ಬಸ್ ಸ್ಟಾಪನಲ್ಲಿ ಇಳಿದು, ಅಲ್ಲಿಂದ ಆರೋಪಿಯ ಆಟೋ ಹಿಡಿದು ಮೀನಾಕ್ಷಿ ಚೌಕದಲ್ಲಿರುವ ಸೌರಭ ಪಿ.ಜಿಗೆ ಬಂದಿದ್ದೆ. ನನ್ನ ಹತ್ತಿರ ಚಿಲ್ಲರ ಇಲ್ಲದೆ ಇದ್ದಾಗ ಆತ ನನ್ನನ್ನು ವಿಚಾರಿಸಿ ಯಾವ ಊರು, ಹೆಸರು ಇತ್ಯಾದಿಗಳನ್ನು ಕೇಳಿದ್ದ. ಆಗ ನಾನು ನನ್ನ ಮಗಳು ಚಾಸಾ-1

ಇಲ್ಲಿ ಕಾಲೇಜ ಕಲೆಯುತ್ತಿದ್ದಾಳೆ ಅವಳನ್ನು ನೋಡಲು ಬಂದಿದ್ದೆ. ಅಷ್ಟರಲ್ಲಿ ನನ್ನ ಮಗಳು ಪಿ.ಜಿಯಿಂದ ಕೆಳಗಡೆ ಬಂದು ನಿಂತಿದ್ದಳು. ಆಗ ಆರೋಪಿ ನನ್ನ ಮಗಳಿಗೆ ಪರಿಚಯ ಆದ.

3) ಘಟನೆ ಆದ ಎರಡು ದಿನ ಆದ ಮೇಲೆ ನನ್ನ ಮಗಳು ನನಗೆ ಪೋನ್ ಮಾಡಿ ಆರೋಪಿ ತನ್ನನ್ನು ಆಟೋದಲ್ಲಿ ಕರೆದುಕೊಂಡು ಹೋಗಿ ಅತ್ಯಾಚ್ಯಾರ ಮಾಡಿದ ಅಂತಾ ವಿಷಯವನ್ನು ತಿಳಿಸಿದ್ದಳು. ನನಗೆ ಆರಾಮ ಇಲ್ಲದೇ ಇದುದ್ದರಿಂದ 2 ದಿನ ಆದ ಮೇಲೆ ವಿಜಯಪುರದ ಪಿ.ಜಿಗೆ ಬಂದು, ನಂತರ ಠಾಣೆಗೆ ತೆರಳಿ ಆರೋಪಿ ಮೇಲೆ ದೂರನ್ನು ನನ್ನ ಮಗಳು ನೀಡಿರುತ್ತಾಳೆ. ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುತ್ತಾರೆ. ನನ್ನ ಮಗಳನ್ನು ಜಮಖಂಡಿ ರಸ್ತೆಗೆ ಕರೆದುಕೊಂಡು ಹೋಗಿ ಕೃತ್ಯ ಎಸಗಿರುತ್ತಾನೆ ಅಂತಾ ಮಗಳು ಹೇಳಿದ್ದಳು. ಆರೋಪಿಯ ಹೆಸರು ತೋಹಿದ್ ಗೌಸ ಸಿಂದಗಿ ಅಂತಾ ಗೊತ್ತಾಗಿದೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಆಟೋವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ-6 ಪೊಟದಲ್ಲಿರುವ ಆಟೋವನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ.ವಿ.ಎಸ್.ಪಿ ವಕೀಲರಿಂದಃ ಸಮಯ ಕೋರಿದ್ದು, ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲನ್ನು ಇಲ್ಲ ಅಂತಾ ತೆಗೆದುಕೊಳ್ಳಲಾಗಿದೆ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.
**09/09/2024**